# ‘ಕರಿಮುಡಿ’ಯ ಬಾಣಂತನ!

ಗಂಡು ಹಾಗೂ ಹೆಣ್ಣು ಹಕ್ಕಿಗಳೆರಡೂ ಮರಿಗಳ ಪಾಲನೆ ಪೋಷಣೆಯಲ್ಲಿ ಸಮಾನ ಜವಾಬ್ದಾರಿ ನಿರ್ವಹಿಸುವುದು ಈ ಹಕ್ಕಿಗಳ ವೈಶಿಷ್ಟ್ಯ.

ಚಿತ್ರ-ಬರಹ:
ಗಣೇಶ ಕಾಳೀಸರ





ಅಪ್ಪ, ಅಮ್ಮ ಬರುವುದನ್ನು ದೂರದಿಂದಲೇ ಗ್ರಹಿಸುವ ಮರಿಗಳು

ಪಕ್ಷಿಗಳದ್ದು ಹೋರಾಟದ ಬದುಕು. ಸಂತಾನೋತ್ಪತ್ತಿ ಸಮಯದಲ್ಲಂತೂ ಯೋಧರಂತೆ ಕೆಲಸ ಮಾಡುತ್ತವೆ. ಪ್ರಕೃತಿಯ ಆಹಾರ ಸರಪಳಿಯನ್ನು ಎದುರಿಸಿ ತಮ್ಮ ವಂಶವನ್ನು ಬೆಳೆಸುವುದು ಪುಟ್ಟ ಪಕ್ಷಿಗಳಿಗೆ ನಿಜಕ್ಕೂ ಸವಾಲಿನ ಕೆಲಸ. ಅದರಲ್ಲೂ ಕೆಲ ಪ್ರಭೇದದ ಹಕ್ಕಿಗಳು ಮಳೆಗಾಲದಲ್ಲೂ ಗೂಡು ಕಟ್ಟಿ ಮರಿ ಮಾಡುತ್ತವೆ. ಮಳೆಗಾಲದಂತಹ ಪ್ರತಿಕೂಲ ವಾತಾವರಣದಲ್ಲಿ ಗೂಡು ಕಟ್ಟಿ ಮರಿ ಮಾಡುವ ಸವಾಲಿನ ಕೆಲಸ. ಹೀಗೆ ಮಳೆಗಾಲದಲ್ಲಿ ಮರಿ ಮಾಡುವ ಕೆಲವೇ ಪ್ರಭೇದಗಳಲ್ಲಿ ಕರಿಮುಡಿ ಹುಳಗುಳುಕವೂ ಒಂದು.

ಗುಬ್ಬಚ್ಚಿಯ ಗಾತ್ರದಲ್ಲಿರುವ ಈ ಹಕ್ಕಿ ನೀಲಿ ಬಣ್ಣದ್ದು. ಹೊಟ್ಟೆ ಮತ್ತು ಬಾಲದ ತುದಿ ಭಾಗದಲ್ಲಿ ಬೂದು ಬಣ್ಣ. ತಲೆಯ ಹಿಂಭಾಗದಲ್ಲಿ ಮುಡಿ ಕಟ್ಟಿದಂತೆ ಕಪ್ಪು ಬಣ್ಣ ಇರುವುದರಿಂದಲೇ ಇದನ್ನು ‘ಕರಿಮುಡಿ’ ಎಂದು ಕರೆಯುತ್ತಾರೆ. ಹೆಣ್ಣು ಹಕ್ಕಿ ತಿಳಿಯಾದ ನೀಲಿ ಬಣ್ಣ ಹೊಂದಿದ್ದು, ತಲೆಯ ಹಿಂಬದಿಯ ಕಪ್ಪು ಮುಡಿ ಇರುವುದಿಲ್ಲ. ಸಾಮಾನ್ಯವಾಗಿ ಎಲ್ಲ ಪಕ್ಷಿಗಳಲ್ಲಿ ಇರುವಂತೆ ಗಂಡು ಹಕ್ಕಿಯೇ ಹೆಣ್ಣು ಹಕ್ಕಿಗಿಂತ ಹೆಚ್ಚು ಆಕರ್ಷಕವಾಗಿರುತ್ತದೆ.

ಮೇ ತಿಂಗಳಿನಿಂದ ಅಗಸ್ಟ್ ತಿಂಗಳಿನ ನಡುವೆ, ನೆಲದಿಂದ 8-10 ಅಡಿ ಎತ್ತರದಲ್ಲಿ, ಗಿಡಗಳ ಕೊಂಬೆಯ ತುದಿಗೆ ಬಟ್ಟಲಿನಾಕಾರದ ಗೂಡು ಕಟ್ಟುತ್ತವೆ. ಹುಳ, ಹುಪ್ಪಡಿಗಳೇ ಈ ಪಕ್ಷಿಗಳ ಆಹಾರ. ಹುಳ ಹುಪ್ಪಡಿಗಳಿರುವಲ್ಲಿ ಇತರ ಪಕ್ಷಿಗಳೊಂದಿಗೆ ಇವೂ ಕೀಟ ಬೇಟೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಸಾಮಾನ್ಯವಾಗಿ 2-3 ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.

(8ನೇ ಪುಟ ನೋಡಿ)